**OS: 95/2019**
**P.W-1**

ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ

ದಿನಾಂಕಃ 12.10.2023 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ:

ದಿಃ 3.12.1969 ರ ನೋಂದಾಯಿತ ಕ್ರಯ ಪತ್ರವನ್ನು ನಿಪಿ 184 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ 1 ರಿಂದ 3 ಪ್ರತಿವಾದಿಯ ಪರ ಎ ವಿ ಕೆ ವಕೀಲರಿಂದಃ

ದಾವಾ ಆಸ್ತಿ ನಮಗೆ ಬರಬೇಕೆಂದು ನಾವು ಈ ದಾವೆ ಸಲ್ಲಿಸಿರುತ್ತೇವೆ. ದಾವಾ ಆಸ್ತಿ ಪಹಣಿ ತಪ್ಪಾಗಿದ್ದರಿಂದ ಅದನ್ನು ತಿದ್ದುಪಡಿ ಮಾಡುವಂತೆ ಕಂದಾಯ ಅಧಿಕಾರಿಗೆ ನಿರ್ದೇಶನ ಕೋರಿ ಅದಕ್ಕೆ ಪರಿಹಾರ ಕೋರಿರುತ್ತೇನೆ ಎಂದರೆ ಸರಿ. ಕಂದಾಯ ಅಧಿಕಾರಿಗಳನ್ನು ಈ ದಾವೆಯಲ್ಲಿ ಪಕ್ಷಗಾರನನ್ನಾಗಿ ಮಾಡಿಲ್ಲ ಎಂದರೆ ಸರಿ. ಪ್ರತಿವಾದಿ 1 ರಿಂದ 3 ರವರ ತಂದೆಯ ಹೆಸರು ನನಗೆ ಗೊತಿಲ್ಲ. ಸ.ನಂ.242 ರಲ್ಲಿ 4 ಎಕ್ರೆ 96 ಸೆಂಟ್ಸ ಇದೆ. ಸದರಿ ಆಸ್ತಿಯ ಚೆಕ್ಕುಬಂದಿ , ಪೂರ್ವಕ್ಕೆ ವೆಂಕಣ್ಣನ ಮಗ ತಿಪ್ಪೆಸ್ವಾಮಿ , ಪಶ್ಚಿಮಕ್ಕೆ ಸಂಗಪ್ಪನವರ ಮಲ್ಲಪ್ಪರ ಜಮೀನು, ಉತ್ತರಕ್ಕೆ ಬಾಣದ ಮಲಿಯಪ್ಪನ ಹೊಲ, ದಕ್ಷಿಣಕ್ಕೆ ಬಸವರಾಜನ ಹೊಲ ಇರುತ್ತದೆ. ಈಗ ಹೇಳಿದ ಚೆಕ್ಕುಬಂದಿ ಮತ್ತು ವಾದ ಪತ್ರದಲ್ಲಿಸದರಿ ಆಸ್ತಿಗೆ ಸಂಬಂದಿಸಿದಂತೆ ನೀಡಿದ ಚೆಕ್ಕುಬಂದಿ ಬೇರೆ ಬೇರೆ ಇದೆ ಎಂದರೆ ಸರಿ. ದಾವಾ ಅನುಸುಚಿ 1 ರ ಆಸ್ತಿ ನಮಗೆ ಸೇರಿದ್ದು ಎಂದು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ದಾವಾ ಅನುಸುಚಿ 1 ರ ಆಸ್ತಿ ನಮ್ಮ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿ. 1970 ರಿಂದ ಪ್ರತಿವಾದಿ 1 ರಿಂದ 3 ರವರ ತಂದೆ ಸದರಿ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸದರಿಯವರು ಕಾಲವಾದ ನಂತರ ಪ್ರತಿವಾದಿ 1 ರಿಂದ 3 ರವರು ಸ್ವಾಧೀನ ಅನುಭವದಲ್ಲಿ ಇಲ್ಲಿವರೆಗೂ ಇದ್ದಾರೆ ಎಂದರೆ ಸರಿ. ಸದರಿ ಆಸ್ತಿಗೆ ಸಂಬಂದಿಸಿದಂತೆ ಪ್ರತಿವಾದಿ 1 ರಿಂದ 3 ರವರ ತಂದೆ ಅವರ ಕಾಲ ನಂತರ ಸದರಿ ಪ್ರತಿವಾದಿಗಳು ಮಾಲೀಕರಾಗಿದ್ದಾರೆ ಎಂದರೆ ಸರಿ . ನಿಪಿ 1 ರ ದಾಖಲೆ ಪ್ರತಿವಾದಿ 1 ರಿಂದ 3 ರವರ ತಂದೆ ಬಸವನಗೌಡ ಹೆಸರಲ್ಲಿ ಇದೆ ಎಂದರೆ ಸರಿ. 1965 ರಿಂದ ಪ್ರತಿವಾದಿ 1 ರಿಂದ 3

ರವರ ತಂದೆ ಬಸವನಗೌಡ ಹೆಸರಿನಲ್ಲಿದ್ದು , ಅವರ ಕಾಲ ನಂತರ ಪ್ರತಿವಾದಿ 1 ರಿಂದ 3 ರವರ ಹೆಸರಿನಲ್ಲಿ ಇಲ್ಲಿವರಗೂ ಕಂದಾಯ ದಾಖಲೆಯಲ್ಲಿ ಮುಂದುವರೆಯುತ್ತಾ ಬಂದಿದೆ ಎಂದರೆ ಸರಿ . ಸದರಿ ಕಂದಾಯ ದಾಖಲೆಗಳನ್ನು ನನ್ನ ತಂದೆ ಜೀವಂತವಿದ್ದಾಗ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಆದರೆ ನಾವು ಪ್ರಶ್ನೆ ಮಾಡಿರುತ್ತೇವೆ. ನನ್ನ ಅಣ್ಣ ಆಂಜಿನೇಯ ರೆಡ್ಡಿ ಸದರಿ ಕಂದಾಯ ದಾಖಲೆಗಳನ್ನು ಹೊಸಪೇಟೆ ಎ.ಸಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುತ್ತೇವೆ. ನನ್ನ ಅಣ್ಣ ಎ.ಸಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲ ಎಂದರೆ ನನಗೆ ಗೊತಿಲ್ಲ. ನನ್ನ ಅಣ್ಣಂದಿರು ಹಾಕಿರಬಹುದು. ನನ್ನ ಅಣ್ಣಂದಿರು ಸಲ್ಲಿಸಿರುವ ಮೇಲ್ಮನವಿ ಅರ್ಜಿ ಹಾಕಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 3 ಗಳಿಗೆ ತಿಳಿಯದ ಹಾಗೇ ತಹಶೀಲ್ದಾರ ನ್ಯಾಯಾಲಯದಲ್ಲಿ ಹೇಮರೆಡ್ಡಿ ಅವರ ಹೆಸರಿಗೆ ಖಾತೆ ಮಾಡಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಖಾತೆಯನ್ನು ಪ್ರಶ್ನಿಸಿ ಪ್ರತಿವಾದಿ 1 ರಿಂದ 3 ರವರು ಮಾನ್ಯ ಎ ಸಿ ಹೊಸಪೇಟೆ ಮುಂದೆ ಆರ್ ಆರ್ ಟಿ ಅಪೀಲು ನಂ.26/2002-03 ರಂತೆ ಪ್ರಶ್ನೆ ಮಾಡಿದ್ದರು ಎಂದರೆ ನನಗೆ ಗೊತಿಲ್ಲ. ಸದರಿ ಪ್ರಕರಣದಲ್ಲಿ ಎ.ಸಿ ರವರು ದಿಃ 28.8.2003 ರಂದು ಸದರಿ ಹೇಮ ರೆಡ್ಡಿ ಗೆ ಆದ ಖಾತೆ ವಜಾ ಮಾಡಿ ಪ್ರತಿವಾದಿ 1 ರಿಂದ 3 ರ ಹೆಸರಿಗೆ ಖಾತೆ ಅಂಗೀಕರಿಸಿ ಆದೇಶ ಮಾಡಿದ್ದಾರೆ ಎಂದರೆ ಗೊತಿಲ್ಲ. ಸದರಿ ಆದೇಶದ ವಿರುದ್ದ ಡಿ.ಸಿ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ . 49 ವರ್ಷ ಕಳೆದ ನಂತರ ಈ ದಾವೆಯನ್ನು ಹಾಕಿದ್ದೇನೆ ಎಂದರೆ ಸರಿ. ನನ್ನ ಮತ್ತು ಇತರ ವಾದಿಗಳ ಹೆಸರಿನಲ್ಲಿ ದಾವಾ ಆಸ್ತಿ 1 ನಮ್ಮ ಹೆಸರಿನಲ್ಲಿ ಇದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ .

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

ಓ,ಹೇ,ಕೇ,ಸರಿ ಇದೆ,

ಪಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ
ಕೂಡ್ಲಿಗಿ.